# ನೆಲಮಂಗಲ ಯೋಜನಾ ಪ್ರಾಧಿಕಾರ

ದೂರವಾಣಿ : 96630 46622 | Email : nelamangaka.pa@gmail.com

2ನೇ ಮುಖ್ಯ ರಸ್ತೆ, ಸದಾಶಿವನಗರ, ನೆಲಮಂಗಲ-562 123, ಬೆಂಗಳೂರು ಗ್ರಾಮಾಂತರ ಜಿಲ್ಲೆ


ಸಂಖ್ಯೆ:ನೆಯೋಪ್ರಾ:**LAO:75:2022-23** ದಿನಾಂಕ: 2 8 AUG 2026

## "ಅಂತಿಮ ವಸತಿ ವಿನ್ಯಾಸ ನಕ್ಷೆ ಅನುಮೋದನೆ"

**(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17 (2-B) ರಡಿಯಲ್ಲಿ)**

**ವಿಷಯ:** ನೆಲಮಂಗಲ ತಾಲ್ಲೂಕು, ಕಸಬಾ-2 ಹೋಬಳಿ, ಕೆಂಪಲಿಂಗನಹಳ್ಳಿ ಗ್ರಾಮದ ಸ.ನಂ.53/1 ರಲ್ಲಿ 03ಎಕರೆ-37ಗುಂಟೆ ಪೈಕಿ 00ಎಕರೆ-22ಗುಂಟೆ ಒತ್ತುವರಿ ಪ್ರದೇಶ ಹೊರತುಪಡಿಸಿ ಉಳಿಕೆ 03ಎಕರೆ-08ಗುಂಟೆ (00ಎಕರೆ-01ಗುಂಟೆ "ಎ" ಖರಾಬು ಸೇರಿ) ವಿಸ್ತೀರ್ಣದ ಪ್ರದೇಶಕ್ಕೆ ತಾತ್ಕಾಲಿಕ ಅನುಮೋದನೆಯಾಗಿರುವ **ವಸತಿ ಉದ್ದೇಶದ ಬಹು ನಿವೇಶನ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ನೀಡಿ ಶೇ 100 ರಷ್ಟು** ನಿವೇಶನಗಳನ್ನು ನೋಂದಣಿಗಾಗಿ ಬಿಡುಗಡೆಗೊಳಿಸುವ ಬಗ್ಗೆ.

**ಉಲ್ಲೇಖ:**
1. ಅರ್ಜಿದಾರರ ಮನವಿ ದಿನಾಂಕ09:-11-2022.
2. **ಮಾನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: 413000, ದಿನಾಂಕ: 02-11-2022.**
3. ದಿನಾಂಕ:27-02-2023 ರಂದು ನಡೆದ ಪ್ರಾಧಿಕಾರದ 113 ನೇ ಸಭೆಯ ವಿಷಯ ಸಂಖ್ಯೆ:113.6.5 ರ ನಿರ್ಣಯ.
4. ಪ್ರಾಧಿಕಾರಕ್ಕೆ ಶುಲ್ಕ ಪಾವತಿಸಿಕೊಳ್ಳಲಾದ ರಶೀದಿ ಸಂಖ್ಯೆ:10659, ದಿನಾಂಕ: 06-03-2023. ರೂ.14,48,900-00.
5. **ಈ ಕಛೇರಿ ಕರಡು ವಿನ್ಯಾಸ ಅನುಮೊದನೆ ಪತ್ರ ಸಂಖ್ಯೆ:ನೆಯೋಪ್ರಾ:ಎಲ್.ಎ.ಓ:75:2022-23, ದಿನಾಂಕ:10-03-2023.**
6. ಅರ್ಜಿದಾರರ ಮನವಿ ಪತ್ರ, ದಿನಾಂಕ:19-01-2026.
7. **ಮಹಾನಗರ ಯೋಜಕರು ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ರವರ ಪೂರ್ವಸಮ್ಮತಿ ದಿನಾಂಕ:30-05-2026.**
8. ದಿನಾಂಕ:09-07-2026 ರಂದು ನಡೆದ ಪ್ರಾಧಿಕಾರದ 128 ನೇ ಸಭೆಯ ವಿಷಯ ಸಂಖ್ಯೆ:128.9.9 ರ ನಿರ್ಣಯ.
9. ಈ ಕಛೇರಿ ಶುಲ್ಕ ಪಾವತಿ ತಿಳುವಳಿಕೆ ಪತ್ರ ಸಂಖ್ಯೆ:ನೆಯೋಪ್ರಾ:75:2022-23, ದಿನಾಂಕ:16-07-2026.
10. ಪ್ರಾಧಿಕಾರಕ್ಕೆ ಶುಲ್ಕ ಪಾವತಿಸಿಕೊಳ್ಳಲಾದ ರಶೀದಿ ಸಂಖ್ಯೆ:13242, ದಿನಾಂಕ:22-07-2026, ರೂ.13,000-00

11. ಅರ್ಜಿದಾರರು ನಾಗರೀಕ ಸೌಲಭ್ಯ ನಿವೇಶನವನ್ನು ಪ್ರಾಧಿಕಾರಕ್ಕೆ ಹಸ್ತಾಂತರಿಸಿರುವ ನೋಂದಾಯಿತ ಪರಿತ್ಯಾಜನಾ ಪತ್ರ, ದಿನಾಂಕ:25-08-2026.
12. ಸಾರ್ವಜನಿಕ ರಸ್ತೆ ಮತ್ತು ಉದ್ಯಾನವನ ಪ್ರದೇಶವನ್ನು ಪೌರಾಯುಕ್ತರು, ನಗರಸಭೆ, ನೆಲಮಂಗಲ ರವರು ಹಸ್ತಾಂತರಿಸಿಕೊಂಡಿರುವ ಬಗ್ಗೆ ನೀಡಿರುವ ಪತ್ರ ಸಂಖ್ಯೆ:ನಸನೆ/ಕಂದಾಯ:ಸಿಆರ್:/21/2026-27, ದಿನಾಂಕ:24-08-2026 ಹಾಗೂ ಸದರಿ ನಗರಸಭೆಗೆ ಹಸ್ತಾಂತರಿಸಿಕೊಂಡಿರುವ ನೊಂದಾಯಿತ ಪರಿತ್ಯಾಜನಾ ಪತ್ರದ ಪ್ರತಿ.

******************

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರಲ್ಲಿ ಅರ್ಜಿದಾರರಾದ **ಶ್ರೀ ಮಂಜುನಾಥ್** ಸಿ. **ಬಿನ್ ಚಂದ್ರಪ್ಪ ಮತ್ತು ಎನ್ ಶಶಿಧರ್ ಬಿನ್ ಲೇಟ್ ನರಸಪ್ಪ** ರವರು ಈ ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿ, ನೆಲಮಂಗಲ ತಾಲ್ಲೂಕು, ಕಸಬಾ-2 ಹೋಬಳಿ, ಕೆಂಪಲಿಂಗನಹಳ್ಳಿ ಗ್ರಾಮದ ಸ.ನಂ.53/1 ರಲ್ಲಿ 03ಎಕರೆ-37ಗುಂಟೆ ಪೈಕಿ 00ಎಕರೆ-22ಗುಂಟೆ ಒತ್ತುವರಿ ಪ್ರದೇಶ ಹೊರತುಪಡಿಸಿ **ಉಳಿಕೆ 03ಎಕರೆ-08ಗುಂಟೆ (00ಎಕರೆ-01ಗುಂಟೆ "ಎ" ಖರಾಬು ಸೇರಿ)** ವಿಸ್ತೀರ್ಣದ ಪ್ರದೇಶಕ್ಕೆ **ವಸತಿ** ಉದ್ದೇಶಕ್ಕೆ ಬಹು ನಿವೇಶನ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಕೋರಿರುತ್ತಾರೆ. ಉಲ್ಲೇಖ (2) ರಲ್ಲಿ ಮಾನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರ ಅಧಿಕೃತ ಜ್ಞಾಪನ ಪತ್ರದಲ್ಲಿ ಪ್ರಸ್ತಾಪಿತ ಪ್ರದೇಶವನ್ನು **ವಸತಿ** ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಾಡಿ ಆದೇಶಿಸಿರುತ್ತಾರೆ. ಆದ್ದರಿಂದ, ವಿಷಯವನ್ನು ಉಲ್ಲೇಖ (3) ರ ಪ್ರಾಧಿಕಾರದ ಸಭೆಯಲ್ಲಿ ವಿಷಯವನ್ನು ಮಂಡಿಸಲಾಗಿದ್ದು, ಸಭೆಯ ನಿರ್ಣಯದಂತೆ ಅರ್ಜಿದಾರರಿಂದ ಉಲ್ಲೇಖ (4) ರಲ್ಲಿ ನಿಗಧಿತ ಶುಲ್ಕಗಳನ್ನು ಪಾವತಿಸಿಕೊಂಡು, ಉಲ್ಲೇಖ (5) ರಲ್ಲಿ ಪ್ರಶ್ನಿತ ಪ್ರದೇಶಕ್ಕೆ **ವಸತಿ ಉದ್ದೇಶದ ಬಹು ನಿವೇಶನ ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಅನುಮೋದನೆ** ನೀಡಲಾಗಿರುತ್ತದೆ. ಪ್ರಸ್ತುತ ಅರ್ಜಿದಾರರು ಪ್ರಸ್ತಾವಿತ ಪ್ರದೇಶದಲ್ಲಿ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯಂತೆ ಕಾಮಗಾರಿಗಳನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸಿ, ವಸತಿ ಉದ್ದೇಶದ ಬಹು ನಿವೇಶನ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ನೀಡಿ ಶೇ.100 ರಷ್ಟು ನಿವೇಶನಗಳನ್ನು ನೋಂದಣಿಗಾಗಿ ಬಿಡುಗಡೆ ಮಾಡುವಂತೆ ವಿವಿಧ ಇಲಾಖೆ / ಸಂಸ್ಥೆಗಳಿಂದ ಈ ಕೆಳಕಂಡಂತೆ ದೃಢೀಕರಣ ಪತ್ರ / ನಿರಾಕ್ಷೇಪಣಾ ಪತ್ರಗಳೊಂದಿಗೆ ಉಲ್ಲೇಖ (6) ರಲ್ಲಿ ಮನವಿ ಸಲ್ಲಿಸಿರುತ್ತಾರೆ.

1. **ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ಎಲೆಕ್ಟ್ರಿಕ್), ಬೆಸ್ಕಾಂ, ನೆಲಮಂಗಲ ರವರ ಪತ್ರ ಸಂಖ್ಯೆ:AEEE(NEI)/AE(T)/2024-25/7565, ದಿನಾಂಕ:07-11-2024** ರಲ್ಲಿ ಸದರಿ ವಸತಿ ಬಡಾವಣೆಗೆ ವಿದ್ಯುತ್ ಸಂಪರ್ಕ ಕಲ್ಪಿಸಿರುವ ಬಗ್ಗೆ **Service Certificate** ನೀಡಿರುತ್ತಾರೆ.

2. **ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿ (ಜಿ.ಪಂ.) ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರ ಪತ್ರ ಸಂಖ್ಯೆ:ಹಿಸತೋನಿ:ಜಿಪಂ:ನೆಲ:ವಿನಿ:1:2025-26, ದಿನಾಂಕ:12-01-2026** ರಂದು ಪ್ರಶ್ನಿತ ಪ್ರದೇಶಗಳಿಗೆ ಅನುಮೋದನೆಗೊಂಡಿರುವ ನಕ್ಷೆಯಂತೆ ಉದ್ಯಾನವನವನ್ನು ಅಭಿವೃದ್ಧಿ ಪಡಿಸಲು ನಿಗಧಿಪಡಿಸಿರುವ ಸ್ಥಳಗಳಲ್ಲಿ ನೆರಳು ನೀಡುವಂತಹ ವಿವಿಧ ಮರ ಜಾತಿಯ ಗಿಡಗಳನ್ನು ನೆಟ್ಟಿರುತ್ತಾರೆ, ಹಾಗೂ ಉದ್ಯಾನವನದ ಸುತ್ತಲೂ ಪೆನ್ಸಿಂಗ್ ಅಳವಡಿಸಿ ಅಭಿವೃದ್ಧಿ ಪಡಿಸಿರುತ್ತಾರೆ ಎಂದು ದೃಢೀಕರಣ ಪತ್ರ ನೀಡಿರುತ್ತಾರೆ.

3. **ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಉಪ ವಿಭಾಗ, ನೆಲಮಂಗಲ ರವರ ಪತ್ರ ಸಂಖ್ಯೆ:ಸಕಾಅ:ಲೋಇ:ಉವಿ:ನೆಲ:ನಿರಾಪೇಕ್ಷಣಾ:2025-26/704 ದಿನಾಂಕ:17-01-2026** ರಂದು ನೆಲಮಂಗಲ ಯೋಜನಾ ಪ್ರಾಧಿಕಾರದಿಂದ ಅನುಮೋದನೆಗೊಂಡಿರುವ ವಸತಿ ವಿನ್ಯಾಸ ನಕ್ಷೆಯನ್ನು ದಿನಾಂಕ:17-01-2026 ರಂದು ಸ್ಥಳ ಪರಿಶೀಲನೆ ಮಾಡಲಾಗಿ, ಅನುಮೋದನೆಗೊಂಡಿರುವ ವಸತಿ ವಿನ್ಯಾಸ ನಕ್ಷೆಯಂತೆ ಬಡಾವಣೆಯಲ್ಲಿ ಒಳ ಚರಂಡಿ ವ್ಯವಸ್ಥೆ ಇದ್ದು, ಉಳಿದಂತೆ ಅಡ್ಡಮೋರಿಗಳು, ಮಳೆ ನೀರುಚರಂಡಿ ಹಾಗೂ ಕಾಂಕ್ರೀಟ್ ರಸ್ತೆ ಅಭಿವೃದ್ಧಿ ಕಾಮಗಾರಿ ಪೂರ್ಣಗೊಂಡಿರುತ್ತದೆ. ಸ್ಥಳ ಪರಿಶೀಲನೆ ವೇಳೆ ಕಂಡುಬಂದಂತೆ ವಿದ್ಯುದೀಕರಣ ಕಾಮಗಾರಿ, ಕುಡಿಯುವ ನೀರಿನ ವ್ಯವಸ್ಥೆ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ ಎಂದು ದೃಢೀಕರಣ ಪತ್ರ ನೀಡಿರುತ್ತಾರೆ.

4. **ಪೌರಾಯುಕ್ತರು, ನಗರಸಭೆ, ನೆಲಮಂಗಲ ರವರ ಪತ್ರ ಸಂಖ್ಯೆ:ನಸನೆ:ತಾಶಾ:ಸಿಆರ್: 2024-25, ದಿನಾಂಕ:31-12-2025** ರಂದು ಸದರಿ ಜಮೀನನ್ನು ನಕ್ಷೆಯಂತೆ ಅಭಿವೃದ್ಧಿಪಡಿಸಿದ್ದು ಹಾಗೂ ಕಿರಿಯ ಅಭಿಯಂತರರು ಸ್ಥಳ ಪರಿಶೀಲನೆ ವರದಿಯಂತೆ ಕಾಮಗಾರಿಗಳನ್ನು ಪೂರ್ಣಗೊಳಿಸಿರುತ್ತಾರೆ ಮತ್ತು ನಗರಸಭೆಯಿಂದ ಆಕ್ಷೇಪಣೆ ಇಲ್ಲವೆಂದು ನಿರಾಕ್ಷೇಪಣಾ ಪತ್ರವನ್ನು ನೀಡಿರುತ್ತಾರೆ.

5. **ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಬೆಂಗಳೂರು ರವರ ಪತ್ರ ಸಂಖ್ಯೆ:ಕಜಮ/ಕಾ.ಅ/ಬೆಂ/ತಾಂತ್ರಿಕ/ಸಅ-1/ಖಾ.ಬ/ನೆಲಮಂಗಲ/ 1128/2024-25 ದಿನಾಂಕ:14-10-2024** ರಂದು ಸದರಿ ವಸತಿ ಬಡಾವಣೆಯನ್ನು ಪರಿವೀಕ್ಷಣೆ ಮಾಡಿ ಬಡಾವಣೆಯಲ್ಲಿ ಕೈಗೊಂಡಿರುವ ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಗಳ ಸಂಬಂಧ ಖಾಸಗಿ ಬಡಾವಣೆಯ ಪ್ರಸ್ತುತ ವಸ್ತು ಸ್ಥಿತಿ ವರದಿಯನ್ನು ಸಲ್ಲಿಸಲಾಗಿದೆ. ಎಂದು ನಿರಾಕ್ಷೇಪಣಾ ಪತ್ರವನ್ನು ನೀಡಿರುತ್ತಾರೆ.

6. ಸದರಿ ಬಡಾವಣೆಯನ್ನು ಅಭಿವೃದ್ಧಿಪಡಿಸಿರುವ ಬಗ್ಗೆ ಬಡಾವಣೆಯ ಛಾಯಾಚಿತ್ರಗಳು.

ಮುಂದುವರೆದು, ಸದರಿ ವಿಷಯವನ್ನು ಮಾನ್ಯ ಮಹಾನಗರ ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ರವರ ಪತ್ರ ದಿನಾಂಕ: 17-12-2024 ರ ಸೂಚನೆಯಂತೆ ಸದರಿ ಪ್ರಸ್ತಾವನೆಗೆ **ಮಾನ್ಯ ಮಹಾನಗರ ಯೋಜಕರಿಂದ** ಪೂರ್ವಾನುಮತಿ ಪಡೆದು ವಿಷಯವನ್ನು ಮುಂದಿನ ನೆಲಮಂಗಲ ಯೋಜನಾ ಪ್ರಾಧಿಕಾರದ ಸಭೆಗೆ ಮಂಡಿಸಬೇಕಾಗಿರುತ್ತದೆ. ಆದ್ದರಿಂದ, ಕಡತವನ್ನು ಮಾನ್ಯ ಮಹಾನಗರ ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ರವರ ಕಛೇರಿಗೆ ಸಲ್ಲಿಸಲಾಗಿರುತ್ತದೆ. ಅದರಂತೆ, ಉಲ್ಲೇಖ (7) ರಲ್ಲಿ ಮಾನ್ಯ ಮಹಾನಗರ ಯೋಜಕರು ಬಿ.ಎಂ.ಆರ್.ಡಿ.ಎ. ರವರು ಪ್ರಶ್ನಿತ ಪ್ರದೇಶಗಳಿಗೆ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ನೀಡಲು ಪೂರ್ವಸಮ್ಮತಿ ನೀಡಿರುತ್ತಾರೆ. ಸದರಿ ವಿಷಯವನ್ನು ಉಲ್ಲೇಖ (8) ರ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಲಾಗಿದ್ದು, ಸದರಿ ಸಭೆಯಲ್ಲಿ ಪ್ರಸ್ತಾವಿತ ಪ್ರದೇಶಕ್ಕೆ ತಾತ್ಕಾಲಿಕ ಅನುಮೋದನೆಯಾಗಿರುವ **ವಸತಿ ಉದ್ದೇಶದ** ಬಹು ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ನೀಡಿ ಶೇ 100 ರಷ್ಟು ನಿವೇಶನಗಳನ್ನು ನೋಂದಣಿಗಾಗಿ ಬಿಡುಗಡೆಗೊಳಿಸಲು ತೀರ್ಮಾನಿಸಲಾಗಿರುತ್ತದೆ. ಆದ್ದರಿಂದ, ಪ್ರಾಧಿಕಾರದ ಸಭೆಯ ನಿರ್ಣಯದಂತೆ ಅರ್ಜಿದಾರರಿಗೆ ಉಲ್ಲೇಖ (9) ರ ಈ ಕಛೇರಿಯ ಪತ್ರದಲ್ಲಿ ಅಗತ್ಯ ಶುಲ್ಕಗಳನ್ನು ಪಾವತಿಸಲು ಸೂಚಿಸಲಾಗಿರುತ್ತದೆ. ಅದರಂತೆ, ಉಲ್ಲೇಖ (10) ರಲ್ಲಿ ಅರ್ಜಿದಾರರು ನಿಗದಿತ ಶುಲ್ಕಗಳನ್ನು ಪಾವತಿಸಿರುತ್ತಾರೆ. ಉಲ್ಲೇಖ (11) ರನ್ವಯ ಅರ್ಜಿದಾರರರು ದಸ್ತಾವೇಜು ನಂಬರ್ : NMG-1-06700-2026-27, ದಿನಾಂಕ: 20-08-2026 ರಲ್ಲಿ **ವಿನ್ಯಾಸದಲ್ಲಿನ ನಾಗರೀಕ ಸೌಲಭ್ಯ ನಿವೇಶನವನ್ನು ನೆಲಮಂಗಲ ಯೋಜನಾ ಪ್ರಾಧಿಕಾರಕ್ಕೆ ಹಸ್ತಾಂತರಿಸಿರುವ (ಮೂಲ) ಪರಿತ್ಯಾಜನಾ ಪತ್ರವನ್ನು ಸಲ್ಲಿಸಿರುತ್ತಾರೆ** ಹಾಗೂ ಉಲ್ಲೇಖ (12) ರನ್ವಯ ಅರ್ಜಿದಾರರರು

ವಿನ್ಯಾಸದಲ್ಲಿನ ರಸ್ತೆ ಹಾಗೂ ಉದ್ಯಾನವನ ಪ್ರದೇಶಗಳನ್ನು ಕ್ರಮವಾಗಿ ಪೌರಾಯುಕ್ತರು, ನಗರಸಭೆ, ನೆಲಮಂಗಲ ರವರ ದಸ್ತಾವೇಜು ನಂಬರ್ NMG-1-06701-2026-27, ದಿನಾಂಕ:20–08–2026 ರಲ್ಲಿ ಹಸ್ತಾಂತರಿಸಿರುವ ಪರಿತ್ಯಾಜನಾ ಪತ್ರದ ಪ್ರತಿಯನ್ನು ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

ನೆಲಮಂಗಲ ತಾಲ್ಲೂಕು, ಕಸಬಾ–2 ಹೋಬಳಿ, ಕೆಂಪಲಿಂಗನಹಳ್ಳಿ ಗ್ರಾಮದ ಸ.ನಂ.53/1 ರಲ್ಲಿ 03ಎಕರೆ–37ಗುಂಟೆ ಪೈಕಿ 00ಎಕರೆ–22ಗುಂಟೆ ಒತ್ತುವರಿ ಪ್ರದೇಶ ಹೊರತುಪಡಿಸಿ **ಉಳಿಕೆ 03ಎಕರೆ–08ಗುಂಟೆ (00ಎಕರೆ–01ಗುಂಟೆ "ಎ" ಖರಾಬು ಸೇರಿ)** ವಿಸ್ತೀರ್ಣದ ಪ್ರದೇಶಕ್ಕೆ **ವಸತಿ** ಉದ್ದೇಶಕ್ಕೆ ತಾತ್ಕಾಲಿಕ ಅನುಮೋದನೆಯಾಗಿರುವ **ಬಹು ನಿವೇಶನ ವಸತಿ ವಿನ್ಯಾಸ ನಕ್ಷೆ"**ಯಲ್ಲಿನ **ಭೂ ಉಪಯೋಗ ವಿಶ್ಲೇಷಣೆ** ಹಾಗೂ ವಿವಿಧ ಅಳತೆಯ ನಿವೇಶನಗಳ ವಿವರಗಳು ಈ ಕೆಳಕಂಡಂತಿದೆ.

| ಕ್ರ.ಸಂ. | ಭೂ ಉಪಯೋಗ ವಿಶ್ಲೇಷಣೆ | ವಿಸ್ತೀರ್ಣ (ಚ.ಮೀ.ಗಳಲ್ಲಿ) | ಶೇಕಡವಾರು (%) |
|---|---|---|---|
| 1 | ವಸತಿ | 6846.38 | 52.89 |
| 2 | ಉದ್ಯಾನವನ | 1295.98 | 10.01 |
| 3 | ನಾಗರೀಕ ಸೌಕರ್ಯ ನಿವೇಶನ | 648.08 | 05.01 |
| 4 | ರಸ್ತೆ | 4153.71 | 32.09 |
| | **ಒಟ್ಟು** | **12944.15** | **100.00** |

| ಕ್ರ.ಸಂ. | ನಿವೇಶನಗಳ ವಿವರ (ಮೀ.ಗಳಲ್ಲಿ) | ಒಟ್ಟು |
|---|---|---|
| 1 | **9.14 X 15.24** | **05** |
| 2 | **9.14 X 12.19** | **28** |
| 3 | **12.19 X 9.14** | **07** |
| 4 | ODD (O) | **20** |
| | **ಒಟ್ಟು** | **60** |

ಮೇಲೆ ವಿವರಿಸುವಂತೆ ವಸತಿ ಪ್ರದೇಶದಲ್ಲಿ **ಒಟ್ಟು 60** ನಿವೇಶನಗಳನ್ನು ಅಳವಡಿಸಿ, **ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 17 (2–B)** ರಂತೆ ಈ ಕೆಳಕಂಡ ನಿಬಂಧನೆಗಳಿಗೊಳಪಟ್ಟು **ವಸತಿ ಉದ್ದೇಶದ ವಿನ್ಯಾಸ ನಕ್ಷೆಗೆ** ಅಂತಿಮ ಅನುಮೋದನೆ ನೀಡಿ, ವಿನ್ಯಾಸದಲ್ಲಿನ ಎಲ್ಲಾ ನಿವೇಶನಗಳನ್ನು ನೋಂದಣಿಗಾಗಿ ಬಿಡುಗಡೆ ಮಾಡಲಾಗಿದೆ.

| ಕ್ರ.ಸಂ. | **ಷರತ್ತುಗಳು** |
|---|---|
| 1. | ಕರ್ನಾಟಕ ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ನಿಯಮಗಳು, 2017 ಅಡಿಯಲ್ಲಿ ಸ್ಥಾಪಿಸಲಾಗಿರುವ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದಲ್ಲಿ **"ಸದರಿ ಅನುಮೋದಿತ** ವಸತಿ ವಿನ್ಯಾಸ / ಬಡಾವಣೆಯನ್ನು ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳಲು ಹಾಗೂ ನೋಂದಣಿ ಮಾಡಿಕೊಂಡ ನಂತರವೇ ಸದರಿ ಅನುಮೋದಿತ ವಸತಿ ವಿನ್ಯಾಸ / ಬಡಾವಣೆಯ ನಿರ್ಮಾಣದ ವ್ಯವಹಾರದ ಕುರಿತು ಜಾಹೀರಾತು, ಬುಕ್ಕಿಂಗ್ ಹಾಗೂ ಮಾರಾಟವನ್ನು ಮಾಡತಕ್ಕದ್ದು". |
| 2. | ಈ ವಿನ್ಯಾಸದಲ್ಲಿನ ನಿವೇಶನಗಳನ್ನು ಪೌರಾಯುಕ್ತರು, ನಗರಸಭೆ, ನೆಲಮಂಗಲ ರವರಿಂದ ಇ–ಖಾತಾ ತೆರೆದು ನಂತರ ಮಾರಾಟ / ಪರಭಾರೆ ಮಾಡತಕ್ಕದ್ದು. |

| | |
|---|---|
| 3. | **ಈ ವಿನ್ಯಾಸದಲ್ಲಿ ಇರುವಂತಹ 'ಬಿ' ಖರಾಬು ಜಾಗಗಳು ಸರ್ಕಾರಕ್ಕೆ ಸೇರಿದವುಗಳಾಗಿದ್ದು, ಈ ಜಾಗಗಳನ್ನು ಯಥಾಸ್ಥಿತಿಯಂತೆ ಕಾಪಾಡತಕ್ಕದ್ದು ಹಾಗೂ ಇವುಗಳನ್ನು ಅತಿಕ್ರಮಣ ಮಾಡತಕ್ಕದ್ದಲ್ಲ. ಮಾನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: 413000, ದಿನಾಂಕ: 02-11-2022. ರಲ್ಲಿನ ಷರತ್ತುಗಳನ್ನು ತಪ್ಪದೇ ಪಾಲಿಸತಕ್ಕದ್ದು.** |
| 4. | ಈ ವಿನ್ಯಾಸದ ಸುತ್ತಲೂ ಕಾಂಪೌಂಡ್ ನಿರ್ಮಿಸಿ, ಗೇಟ್ ಅನ್ನು ಅಳವಡಿಸಿ ಗೇಟೆಡ್ ಕಮ್ಯೂನಿಟಿ ಎಂಬ ಹೆಸರಿನಲ್ಲಿ ನಿವೇಶನಗಳನ್ನು ಮಾರಾಟ ಮಾಡುವುದನ್ನು ನಿಷೇಧಿಸಲಾಗಿದೆ. ಈ ಅನುಮೋದಿತ ವಸತಿ ವಿನ್ಯಾಸದಲ್ಲಿನ ರಸ್ತೆಗಳು, ಸಾರ್ವಜನಿಕ ರಸ್ತೆಗಳಾಗಿದ್ದು ಇವುಗಳನ್ನು ಸಾರ್ವಜನಿಕ ಉಪಯೋಗಕ್ಕಾಗಿ ಮಾತ್ರ ಮುಕ್ತವಾಗಿಡತಕ್ಕದ್ದು. ಈ ರಸ್ತೆಗಳಿಗೆ ಅಡ್ಡವಾಗಿ ತಡೆಗೋಡೆಯನ್ನು ನಿರ್ಮಿಸತಕ್ಕದ್ದಲ್ಲ ಹಾಗೂ ಈ ರಸ್ತೆಗಳಿಂದ ಅಕ್ಕಪಕ್ಕದ ಜಮೀನುಗಳಿಗೆ ಇರುವ ಸಂಪರ್ಕವನ್ನು ಯಾವುದೇ ಕಾರಣಕ್ಕೂ ನಿರ್ಭಂದಿಸತಕ್ಕದ್ದಲ್ಲ. |
| 5. | ಈ ವಿನ್ಯಾಸದಲ್ಲಿನ ಉದ್ಯಾನವನ ಜಾಗ ಮತ್ತು ರಸ್ತೆಗಳು ಸಾರ್ವಜನಿಕ ಸ್ವತ್ತಾಗಿರುತ್ತವೆ ಆದ್ದರಿಂದ, ಈ ಸಾರ್ವಜನಿಕ ಸ್ವತ್ತುಗಳನ್ನು ಸಾರ್ವಜನಿಕರಿಗೆ ಮುಕ್ತವಾಗಿಡತಕ್ಕದ್ದು. |
| 6. | ಈ ಅನುಮೋದನೆಯು ಜಮೀನಿನ ಮೇಲಿರುವ ಹಕ್ಕನ್ನು ಅಥವಾ ಮಾಲೀಕತ್ವವನ್ನು ನಿರೂಪಿಸುವ ಸಲುವಾಗಿ ಉಪಯೋಗಿಸಲು ಬರುವುದಿಲ್ಲ ಹಾಗೂ ಈ ಜಮೀನುಗಳಿಗೆ ಸಂಬಂಧಿಸಿದ ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಈ ಪ್ರಾಧಿಕಾರವು ಹೊಣೆಯಾಗುವುದಿಲ್ಲ. |
| 7. | ಪ್ರಸ್ತಾವಿತ ಜಮೀನುಗಳು ಯಾವುದೇ ಭೂ ಸ್ವಾಧೀನಕ್ಕೆ ಒಳಪಟ್ಟಿದ್ದಲ್ಲಿ, ಈ ಪ್ರಾಧಿಕಾರವು ಜವಾಬ್ದಾರಿಯಾಗಿರುವುದಿಲ್ಲ. |
| 8. | ಒಂದು ವೇಳೆ ಸರ್ಕಾರವು ಪೂರ್ವಾನ್ವಯವಾಗುವಂತೆ ನಿಗಧಿಪಡಿಸುವ ಇತರೆ ಯಾವುದೇ ಶುಲ್ಕಗಳನ್ನು ಅರ್ಜಿದಾರರು ಪ್ರಾಧಿಕಾರಕ್ಕೆ ಪಾವತಿಸತಕ್ಕದ್ದು. |
| 9. | ಪ್ರಸ್ತಾವಿತ ಜಾಗವು TGR ನ ವಲಯ-1 ರಲ್ಲಿ ಇರುವುದರಿಂದ ತಿಪ್ಪಗೊಂಡನಹಳ್ಳಿ ಜಲಾನಯನ ಪ್ರದೇಶದ ಸಂರಕ್ಷಣೆಗಾಗಿ ಸರ್ಕಾರವು ಹೊರಡಿಸಿರುವ ಅಧಿಸೂಚನೆ ಸಂಖ್ಯೆ:FEE:215:ENV:2000 ದಿನಾಂಕ:18-11-2003 ರಲ್ಲಿನ ನಿರ್ದೇಶನವನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು. ಹಾಗೂ TGR ನ ವಲಯಗಳಿಗೆ ಸಂಬಂಧಿಸಿದಂತೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ:WP.No-38218/2013 ಮತ್ತು ಇತರೆ ಪ್ರಕರಣಗಳಲ್ಲಿ "ಮಾನ್ಯ ಉಚ್ಚ ನ್ಯಾಯಾಲಯವು ನೀಡುವ ಅಂತಿಮ ತೀರ್ಪಿಗೆ" ಒಳಪಟ್ಟಿರುತ್ತದೆ. |
| 10. | ಈ ಅನುಮೋದಿತ ವಿನ್ಯಾಸದಲ್ಲಿನ ನಿವೇಶನಗಳಲ್ಲಿ ಮಳೆನೀರು ಸಂಗ್ರಹಣಾ ಪದ್ಧತಿಯನ್ನು ಕಡ್ಡಾಯವಾಗಿ ಅಳವಡಿಸುವುದು ಹಾಗೂ ವಿನ್ಯಾಸದಲ್ಲಿ ಅಂತರ್ಜಲಾಭಿವೃದ್ಧಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು. |
| 11. | ಈ ಪ್ರಾಧಿಕಾರದ ಪೂರ್ವಾನುಮತಿ ಪಡೆಯದೇ ಈ ವಸತಿ ವಿನ್ಯಾಸದಲ್ಲಿ ಯಾವುದೇ ಬದಲಾವಣೆಯನ್ನು ಮಾಡಬಾರದು ಹಾಗೂ ಈ ವಿನ್ಯಾಸದಲ್ಲಿನ ನಿವೇಶನಗಳನ್ನು ವಾಸದ ಉದ್ದೇಶಕ್ಕೆ ಮಾತ್ರ ಉಪಯೋಗಿಸತಕ್ಕದು. |
| 12. | ಸದರಿ ಬಡಾವಣೆಯಲ್ಲಿ ಸಂಗ್ರಹವಾಗುವ ತ್ಯಾಜ್ಯ ನೀರನ್ನು ಸೂಕ್ತವಾಗಿ ಸಂಸ್ಕರಿಸತಕ್ಕದ್ದು ಹಾಗೂ ಸದರಿ ತ್ಯಾಜ್ಯ ನೀರನ್ನು ತೆರೆದ ಚರಂಡಿ / ನಾಲಾ / ಕೆರೆ/ ಕುಂಟೆ ಮುಂತಾದವುಗಳಿಗೆ ಬಿಡತಕ್ಕದಲ್ಲ. |
| 13. | ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು ರವರ ಪತ್ರದ ಸಂಖ್ಯೆ: PCB:WMC:2096:2018-19:125 ರನ್ವಯ STORM WATER DRAIN ಗಳಲ್ಲಿ ಒಳಹರಿವಿಗಾಗಿ |

| | |
|---|---|
| | ಹಾಗೂ ಸ್ವಚ್ಛತೆಯನ್ನು ಕಾಪಾಡುವ ಸಲುವಾಗಿ Storm water drain ಗಳನ್ನು ಮುಚ್ಚದೆ ಇರುವಂತೆ ಮತ್ತು ಕಾಲಕಾಲಕ್ಕೆ Desilt ಮಾಡತಕ್ಕದ್ದು. |
| 14. | ಸರ್ಕಾರದ ಸುತ್ತೋಲೆ ಸಂಖ್ಯೆ:ನಅಇ 209 ಬಿಎಂಆರ್ 2016 ದಿನಾಂಕ:31.03.2017 ರ ರೀತ್ಯಾ ಪತ್ರಿಕೆ, ಮಾಧ್ಯಮ, ಜಾಹೀರಾತು ಪ್ರಕಟಣೆಗಳಲ್ಲಿ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಹೆಸರನ್ನು ದುರ್ಬಳಕೆ ಮಾಡಿಕೊಳ್ಳುವಂತಿಲ್ಲ. ತಪ್ಪು ಮಾಹಿತಿ ಪ್ರಕಟಿಸದೇ ಅನುಮೋದನೆ ಪಡೆದುಕೊಂಡಿರುವ ಯೋಜನಾ ಪ್ರಾಧಿಕಾರದ ಹೆಸರನ್ನು ಮಾತ್ರ ನಮೂದಿಸತಕ್ಕದ್ದು. |
| 15. | ಈ ವಿನ್ಯಾಸ ನಕ್ಷೆ ಅನುಮೋದನೆಯ ಸಲುವಾಗಿ ಸಲ್ಲಿಸಲಾಗಿರುವ ಭೂ ಮಾಲೀಕತ್ವದ ದಾಖಲೆಗಳು, ಸರ್ವೆಸ್ಕೆಚ್ ಮತ್ತು ಇತರೆ ಯಾವುದೇ ದಾಖಲಾತಿಗಳು/ ಮಾಹಿತಿಗಳು ತಪ್ಪು/ ಸುಳ್ಳು / ಪೋರ್ಜರಿಯಾಗಿದ್ದಲ್ಲಿ ಈ ವಿನ್ಯಾಸ ಅನುಮೋದನೆಯನ್ನು ರದ್ದುಪಡಿಸಲಾಗುವುದು. |

**ಸಹಿ/–**
**ಜಂಟಿ ನಿರ್ದೇಶಕರು,**
**ನಗರ ಮತ್ತು ಗ್ರಾಮಾಂತರ ಯೋಜನೆ**
**ಹಾಗೂ ಸದಸ್ಯ–ಕಾರ್ಯದರ್ಶಿ,**
**ನೆಲಮಂಗಲ ಯೋಜನಾ ಪ್ರಾಧಿಕಾರ,**
**ನೆಲಮಂಗಲ.**

**ಇವರಿಗೆ,**
**ಶ್ರೀ.ಮಂಜುನಾಥ್.ಸಿ ಬಿನ್ ಚಂದ್ರಪ್ಪ ಮತ್ತು**
**ಶ್ರೀ.ಎನ್.ಶಶಿಧರ್ ಬಿನ್ ಲೇ// ನರಸಪ್ಪ,**
ನಂ.24, ರಾಯನ್‌ನಗರ,
ನೆಲಮಂಗಲ ಟೌನ್, ನೆಲಮಂಗಲ ತಾಲ್ಲೂಕು,
ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಪ್ರತಿಯನ್ನು:

1. **ಪೌರಾಯುಕ್ತರು, ನಗರಸಭೆ, ನೆಲಮಂಗಲ** ರವರಿಗೆ ವಿನ್ಯಾಸದ ಪ್ರತಿಯೊಂದಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ.
2. **ಉಪನೋಂದಣಾಧಿಕಾರಿಗಳು, ನೆಲಮಂಗಲ ತಾಲ್ಲೂಕು,** ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರಿಗೆ ವಿನ್ಯಾಸ ನಕ್ಷೆಯಲ್ಲಿನ ನಿವೇಶನಗಳ ಅಳತೆಯಂತೆ ನಿವೇಶನ ನೋಂದಣಿ ಮಾಡಲು ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ.
3. ಕಛೇರಿ ಪ್ರತಿ.

28-8-2
**ಜಂಟಿ ನಿರ್ದೇಶಕರು**
ನಗರ ಮತ್ತು ಗ್ರಾಮಾಂತರ ಯೋಜನೆ
**ಹಾಗೂ ಸದಸ್ಯ–ಕಾರ್ಯದರ್ಶಿ**
ನೆಲಮಂಗಲ ಯೋಜನಾ ಪ್ರಾಧಿಕಾರ
ನೆಲಮಂಗಲ

LAO Final Issue P